<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ, ಪಿರಿಯಾಪಟ್ಟಣ.</u>

**ಸಿ.ಸಿ. ಸಂಃ 1973/2021**

| | | |
|---|---|---|
| ಸಾಕ್ಷಿಯ ಹೆಸರುಃ | ಅಶೋಕ | ಫ್ರಾಸಾಃಃ 6 |
| ತಂದೆ ಹೆಸರುಃ | ರಾಮಶೆಟ್ಟಿ | ಚಾಸಾಃಃ 6 |
| ವಯಸ್ಸುಃ | 35 ವರ್ಷ | ಪ್ರಮಾಣೀಕರಿಸಿದ<br>ದಿಃ 16.02.2026 |
| ಉದ್ಯೋಗಃ | ಚಾಲಕ | |
| ವಾಸ ಸ್ಥಳಃ | ಬೆಂಗಳೂರು | |

<u>ಮುಖ್ಯ ವಿಚಾರಣೆಃ ಸಸಅ ರಿಂದಃ</u>

1. ನನಗೆ ಆರೋಪಿಗಳ ಪರಿಚಯವಿದೆ. ಈ ಪ್ರಕರಣದ ವಿಷಯ ನನಗೆ ಗೊತ್ತಿಲ್ಲ. ಚಾಸಾ-1 ರಿಂದ 5 ಹಾಗೂ 7 ನನಗೆ ಗೊತ್ತು. ಆರೋಪಿತರು ನಮ್ಮೊಂದಿಗೆ ಯಾವತ್ತೂ ಸಹ ಜಗಳ ಮಾಡಿಲ್ಲ. ಗುಂಪು ಕಟ್ಟಿಕೊಂಡು ಬಂದು ಹಲ್ಲೆ ಮಾಡಿಲ್ಲ, ನಮಗೆ ಅವಾಚ್ಯವಾಗಿ ಬೈದಿಲ್ಲ, ಕೈಗಳಿಂದ, ದೊಣ್ಣೆಯಿಂದ ಅಥವಾ ಮಚ್ಚಿನಿಂದ ಹಲ್ಲೆ ಮಾಡಿಲ್ಲ, ಒದ್ದಿಲ್ಲ ಹಾಗೂ ನಮಗೆ ಕೊಲೆ ಬೆದರಿಕೆ ಹಾಕಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ.

2. ಸಾಕ್ಷಿಯು ಅಮಾನತು ನಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುಸಿರುತ್ತಾರೆ. ಮಹಜರನ್ನು ನಿಪಿ - 8 ಎಂದು, ಸಾಕ್ಷಿಯ ಸಹಿಯನ್ನು ನಿಪಿ - 8(ಎ) ಎಂದು ಗುರುತಿಲಾಯಿತು. ನಿಪಿ - 8 ಕ್ಕೆ ನಾನು ಈಗ್ಗೆ 4-5 ವರ್ಷದ ಹಿಂದೆ ಪೊಲೀಸ್ ಠಾಣೆಯಲ್ಲಿ ಪೊಲೀಸರ ಕೋರಿಕೆಯ ಮೇರೆಗೆ ಸಹಿ ಮಾಡಿರುತ್ತೇನೆ. ಪೊಲೀಸರು ನನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿಲ್ಲ ಮತ್ತು ಯಾವುದೇ ವಸ್ತುಗಳನ್ನು ಅಮಾನತುಪಡಿಸಿಕೊಂಡಿರುವುದಿಲ್ಲ. ನಾನು ಯಾವುದೇ ವಸ್ತುಗಳನ್ನು ಠಾಣೆಗೆ ಹಾಜರುಪಡಿಸಿಲ್ಲ. ನಿಪಿ - 8 ರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ.

**(ಈ ಸಮಯದಲ್ಲಿ ಸಹಾಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರುತ್ತಾರೆ. ಅನುಮತಿ ನೀಡಲಾಯಿತು.)**

<u>ಪಾಟೀ ಸವಾಲುಃ ಸಸಅ ರವರಿಂದಃ</u>

1. ದಿನಾಂಕ 16.11.2020 ರಂದು ಬೆಳ್ಳಿಗೆ 6.15 ಗಂಟೆ ಸಮಯದಲ್ಲಿ ಪಿರಿಯಾಪಟ್ಟಣ ಗಾಂಧಿನಗರ ಗ್ರಾಮದಲ್ಲಿ ಚಾಸಾ - 1 ರವರ ಮನೆಯ ಬಳಿ ಚಾಸಾ - 2 ರವರು ಕಲಗಚ್ಚಿನ ಬಕೆಟ್ಟಿನ ವಿಷಯಕ್ಕೆ ಸಂಬಂಧಿಸಿದಂತೆ, 1 ಆರೋಪಿಯು ಸದರಿ ಕಲ್ಗಚ್ಚಿನ ಬಕೆಟ್ಟಿಗೆ ಕಾಲಿನಿಂದ ಒದ್ದು ಈ ರಸ್ತೆಯು ನಿಮ್ಮಪ್ಪಂದಾ ಎಂದು, ಏನೋ ಬೋಳಿ ಮಗನೆ ನೀನು ನಮ್ಮ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಾ ನನಗೆ ತಿರುಗಿ ಪ್ರಶ್ನೆ ಮಾಡುತ್ತಿಯಾ ಎಂದು ಅವಾಚ್ಯ ಶಬ್ದಗಳಿಂದ ಬೈಯ್ದುರು ಎಂದರೆ ಸರಿಯಲ್ಲ.

2. ಜಗಳ ಬಿಡಿಸಲು ಬಂದ ಚಾಸಾ-1 ರವರಿಗೆ ಆರೋಪಿಗಳು ಬೋಳಿಮಕ್ಕಳಾ, ಸೂಳೆ ಮಕ್ಕಳಾ ಎಂದು ಅವಾಚ್ಯವಾಗಿ ಬೈದಿರುತ್ತಾರೆ ಎಂದರೆ ಸರಿಯಲ್ಲ. ನಂತರ 1 ನೇ ಆರೋಪಿ ಕೈಯಲ್ಲಿದ್ದ ಮಚ್ಚಿನಿಂದ ಚಾಸಾ - 1 ರವರ ಬೆನ್ನಿನ ಹಿಂಭಾಗ ಬೀಸಿ ಹೊಡೆದರು ಎಂದರೆ ಸರಿಯಲ್ಲ.

3. ಜಗಳ ಬಿಡಿಸಲು ಹೋದ ಚಾಸಾ - 5 ರವರಿಗೆ 1 ನೇ ಆರೋಪಿ ಅದೇ ಮಚ್ಚಿನಿಂದ ತಲೆಗೆ ಹೊಡೆದರು ಎಂದರೆ ಸರಿಯಲ್ಲ. ನಂತರ ಜಗಳ ಬಿಡಿಸಲು ಹೋದ ನನಗೆ 3 ನೇ ಆರೋಪಿ ಒಂದು ಕಲ್ಲಿನಿಂದ ಬಲ ಕೈಗೆ ಹಾಗೂ 2 ನೇ ಆರೋಪಿ ದೊಣ್ಣೆಯಿಂದ ಬಲಕೈನ ಭುಜದ ಬಳಿ ಹೊಡೆದರು ಎಂದರೆ ಸರಿಯಲ್ಲ.

4. ನಂತರ ಆರೋಪಿ ರಮೇಶ ರವರು ಚಾಸಾ - 7 ರವರ ಬಲಕೈಗೆ ಹಾಗೂ ಚಂದ್ರಶೆಟ್ಟಿ ರವರು ದೊಣ್ಣೆಯಿಂದ ನನ್ನ ಬಲ ಕೈ ಭುಜದ ಬಳಿ ಹೋದರು ಎಂದರೆ ಸರಿಯಲ್ಲ.

5. ನಂತರ 1 ನೇ ಆರೋಪಿ ಚಾಸಾ - 8 ರವರಿಗೆ ಕಾಲಿನಿಂದ ಒದ್ದರು ಎಂದರೆ ಸರಿಯಲ್ಲ. ನಂತರ ಆರೋಪಿತರು ಇವತ್ತು ತಪ್ಪಿಸಿಕೊಂಡಿದ್ದೀರಾ ನಿಮ್ಮನ್ನು ಇಂದಲ್ಲ ನಾಳೆ ಕೊಲೆ ಮಾಡದೇ ಬಿಡುವುದಿಲ್ಲವೆಂದು ಪ್ರಾಣ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಗಲಾಟೆ ವಿಚಾರವಾಗಿ ನಾನು ಪೊಲೀಸರಿಗೆ ಈಗ ಓದಿ ಹೇಳಿ ಕೇಳಿಸಿಕೊಂಡಂತೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ - 9 ಎಂದು ಗುರುತಿಸಲಾಯಿತು.

6. ದಿಃ 17.11.2020 ರಂದು ಗಲಾಟೆ ಸಮಯದಲ್ಲಿ ನನ್ನ ತಂದೆ ಹಾಗೂ ಗಾಯಾಳು ಸುರೇಶ ಶೆಟ್ಟಿ ರವರುಗಳು ಧರಿಸಿದ್ದ ಬಟ್ಟೆಗಳನ್ನು ಪೊಲೀಸ್ ಠಾಣೆಗೆ ಹಾಜರುಪಡಿಸಿದ ಮೇರೆಗೆ ಚಾಸಾ - 11 ಮತ್ತು 12 ರವರ ಸಮಕ್ಷಮ ಸಂಜೆ 5-30 ರಿಂದ 6-00 ಗಂಟೆಯವರೆಗೆ ನಿಪಿ - 8 ರಂತೆ ಬಟ್ಟೆಗಳ ಅಮಾನತು ಮಹಜರ್ ಕ್ರಮವನ್ನು ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ.

7. ಈಗ ನಾವು ಮತ್ತು ಆರೋಪಿತರು ಪರಸ್ಪರ ರಾಜಿ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ಅದೇ ಕಾರಣಕ್ಕೆ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಆರೋಪಿತರ ವಕೀಲರಿಂದಃ

ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು
ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ
ಪಿರಿಯಾಪಟ್ಟಣ